5. ಗಮನ ಸೆಳೆಯುವ ಸೂಚನೆ

ವಿಷಯ:- ರಾಜ್ಯದಲ್ಲಿರುವ ಖಾದಿ ಮಾರಾಟ ಮಳಿಗೆಗಳು ಮಾರಾಟ ಮಾಡುವ ಇತರೇ ರಾಜ್ಯಗಳ ಖಾದಿ ಬಟ್ಟೆ ಮಾರಾಟದ ಮೇಲಿನ ರಿಬೇಟ್‌ನ್ನು ರದ್ದುಪಡಿಸಿರುವ ಬಗ್ಗೆ.

ಶ್ರೀ ಡಿ.ಆರ್. ಪಾಟೀಲ್ (ಗದಗ್):- ಮಾನ್ಯ ಉಪಾಧ್ಯಕ್ಷರೇ, ರಾಜ್ಯದಲ್ಲಿರುವ ಖಾದಿ ಮಾರಾಟ ಮಳಿಗೆಗಳು ಮಾರಾಟ ಮಾಡುವ ಇತರೇ ರಾಜ್ಯದ ಖಾದಿ ಬಟ್ಟೆ ಮಾರಾಟದ ಮೇಲಿನ ರಿಬೇಟ್‌ನ್ನು ರಾಜ್ಯ ಸರ್ಕಾರ ರದ್ದುಪಡಿಸಿರುವ ವಿಚಾರದ ಬಗ್ಗೆ ಮಾನ್ಯ ಸಣ್ಣ ಕೈಗಾರಿಕಾ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಬಿ.ಎ. ಮೋಯಿದ್ದೀನ್ (ಸಣ್ಣ ಪ್ರಮಾಣ ಕೈಗಾರಿಕಾ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ಕೇಂದ್ರ ಸರ್ಕಾರವು ಖಾದಿ ಬಟ್ಟೆಗಾಗಿ ಶೇಕಡ 10ರಷ್ಟು ಸಾಮಾನ್ಯ ರಿಯಾಯಿತಿಯನ್ನು ವರ್ಷದುದ್ದಕ್ಕೂ ನೀಡುತ್ತಿದೆ. ವಿಶೇಷ ಸಂದರ್ಭಗಳಲ್ಲಿ ಶೇಕಡ 15ರಷ್ಟು ರಿಯಾಯಿತಿ ನೀಡುತ್ತಿತ್ತು. 1-4-96 ರಿಂದ ಇದನ್ನು ಶೇಕಡ 10ಕ್ಕೆ ಇಳಿಸಲಾಗಿದೆ. ವಿಶೇಷ ರಿಯಾಯಿತಿ ಗಾಂಧಿ ಜಯಂತಿ ಸಂದರ್ಭದಲ್ಲಿ 90 ದಿನಗಳವರೆಗೆ ನೀಡುತ್ತಿದೆ. ಇದರ ಪ್ರಮುಖ ಉದ್ದೇಶ ಖಾದಿ ಬಗ್ಗೆ ವಿಶೇಷವಾದ ಒತ್ತು ನೀಡುವುದು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಖಾದಿ ಉತ್ಪಾದನೆಯಲ್ಲಿ ತೊಡಗಿರುವ ಗ್ರಾಮೀಣ ಜನರಿಗೆ ಸಹಾಯ ಮಾಡುವುದಾಗಿದೆ. ಈ ಉದ್ದೇಶಕ್ಕೆ ಪೂರಕವಾಗಿ ರಾಜ್ಯ ಸರ್ಕಾರವೂ ಸಹ ಖಾದಿಯ ಮೇಲೆ ರಿಬೇಟ್ ನೀಡುತ್ತಿದೆ. ರಾಜ್ಯ ಸರ್ಕಾರದ ವರ್ಷದುದ್ದಕ್ಕೂ ನೀಡುತ್ತಿರುವ ರಿಬೇಟ್ ಶೇಕಡ 5 ಮತ್ತು ವಿಶೇಷ ಸಂದರ್ಭದಲ್ಲಿ ನೀಡುತ್ತಿರುವ ರಿಬೇಟ್ ಶೇಕಡ 10ರಷ್ಟು ಇರುತ್ತದೆ.

ರಾಜ್ಯ ಸರ್ಕಾರವು ಸಹ ಹೆಚ್ಚುವರಿ ರಿಬೇಟ್ ನೀಡುತ್ತಿರುವ ಉದ್ದೇಶ ರಾಜ್ಯದಲ್ಲಿ ಖಾದಿ ನೂಲಿನ ಮತ್ತು ಬಟ್ಟೆ ಉತ್ಪಾದನೆ ಹೆಚ್ಚಾಗಬೇಕು, ಅದರ ಮೂಲಕ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಗೆ ಹೆಚ್ಚಿನ ಉದ್ಯೋಗಾವಕಾಶ ಲಭ್ಯವಾಗಬೇಕು ಎಂಬುದು. ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಧನ ಸಹಾಯ ಪಡೆದ 142 ಸಂಘ ಸಂಸ್ಥೆಗಳಿಗೆ ಮತ್ತು ಕೇಂದ್ರ ಖಾದಿ ಆಯೋಗದಿಂದ ನೇರ ಧನ ಸಹಾಯ ಪಡೆದ 150 ಸಂಘ ಸಂಸ್ಥೆಗಳಿಗೆ ರಿಬೇಟ್ ಸೌಲಭ್ಯ ನೀಡಲಾಗುತ್ತಿದೆ. ರಿಬೇಟ್‌ನ್ನು ಉತ್ಪದನಾ ಕೇಂದ್ರಗಳುಳ್ಳ ಸಂಘ ಸಂಸ್ಥೆಗಳಿಗೆ ನೀಡಲು ಒತ್ತು ನೀಡಲಾಗಿದೆ. 1993-94ನೇ ಸಾಲಿನಲ್ಲಿ 253 ಲಕ್ಷ ಮತ್ತು 1994-95ನೇ ಸಾಲಿಗೆ ಇನ್ನೂ ಕೆಲವು ಸಂಘ ಸಂಸ್ಥೆಗಳಿಗೆ ರಿಬೇಟ್ ಹಣ ನೀಡಬೇಕಿದ್ದು ಈ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಕೆಲವು ಸಂಘ ಸಂಸ್ಥೆಗಳ ಮಾರಾಟ ಮಳಿಗೆಗಳು ಹೆಚ್ಚಾಗಿ ದೊಡ್ಡ ನಗರ ಪ್ರದೇಶಗಳಲ್ಲಿ ಇದ್ದು, ದುಬಾರಿ ಬೆಲೆಯ ಬಟ್ಟೆಯನ್ನು ಮಾರಿ ಅದಕ್ಕೂ ಸಹ ರಿಬೇಟ್ ನೀಡಬೇಕೆಂದು ಹೇಳಲಾಗುತ್ತಿದೆ. ಸದರಿ ದುಬಾರಿ ಬೆಲೆಯ ಬಟ್ಟೆ ಮಾರಾಟ ಮತ್ತು ರಾಜ್ಯದಲ್ಲಿ ಅವುಗಳ ಉತ್ಪಾದನೆಗೆ ಸಂಬಂಧವೇ ಇಲ್ಲ. ಏಕೆಂದರೆ ರಾಜ್ಯದಲ್ಲಿ ತಯಾರಾಗದೆ ಇರುವ ಖಾದಿ ಬಟ್ಟೆಯಿಂದ ರಾಜ್ಯದಲ್ಲಿ ಯಾವುದೇ

ಉದ್ಯೋಗಾವಕಾಶ ಸೃಷ್ಟಿಯಾಗುವುದಿಲ್ಲ. ಆದರೂ ಸಹ ರಾಜ್ಯ ಸರ್ಕಾರವು ಇದರಲ್ಲಿ ಸ್ವಲ್ಪ ರಿಯಾಯಿತಿಯನ್ನು ನೀಡಿ ವಿನಿಮಯ ಪದ್ಧತಿ ಮೇಲೆ, ವಿನಿಮಯ ಪ್ರಮಾಣದಷ್ಟು ಬಟ್ಟೆಗೂ ಸಹ ರಿಬೇಟ್ ನೀಡುತ್ತಿದೆ. ಈ ಕಾರಣಗಳಿಗಾಗಿ ಸಂಘ ಸಂಸ್ಥೆಗಳು ರಿಬೇಟ್ ನೀಡುವುದರಲ್ಲಿ ರಾಜ್ಯದೊಳಗಿನ ಉತ್ಪಾದನೆ ಮತ್ತು ಹೊರಗಿನ ಉತ್ಪಾದನೆ ಎಂಬ ವಿಷಯದಲ್ಲಿ ತಾರತಮ್ಯ ಇರಬಾರದು ಎಂಬ ವಾದದಲ್ಲಿ ಹುರುಳಿಲ್ಲ.

ಕೇಂದ್ರ ಸರ್ಕಾರವು ಹೈಪವರ್ ಸಮಿತಿ ಶಿಫಾರಸ್ಸಿನನ್ವಯ ಈಗ ಇರುವ ಖಾದಿ ರಿಬೇಟ್ ವ್ಯವಸ್ಥೆಯನ್ನು ಹಿಂದಕ್ಕೆ ತೆಗೆದುಕೊಂಡು ಮಾರುಕಟ್ಟೆ ಅಭಿವೃದ್ಧಿ ಅನುದಾನ ನೀಡುವ ಹೊಸ ವಿಧಾನ ಅಳವಡಿಸಿಕೊಂಡಿದೆ ಎಂದು ತಿಳಿದುಬಂದಿತ್ತು. ಆದರೆ ದಿನಾಂಕ 15-7-96ರ ಆದೇಶದನ್ವಯ ಕೇಂದ್ರ ಸರ್ಕಾರ ಹಿಂದಿನ ರಿಬೇಟ್ ಪದ್ಧತಿಯನ್ನು 1996-97ನೇ ಸಾಲಿಗೂ ಮುಂದುವರೆಸಿದೆ.

+ ಶ್ರೀ ಡಿ.ಆರ್. ಪಾಟೀಲ್:- ಸನ್ಮಾನ್ಯ ಸಚಿವರು, ಹೊರ ರಾಜ್ಯಗಳಿಂದ ಬರತಕ್ಕಂಥ ಖಾದಿ ಬಟ್ಟೆ ಮೇಲೆ ಮತ್ತು ಇಲ್ಲಿ ಉತ್ಪಾದನೆಯಾಗತಕ್ಕಂಥ ಖಾದಿ ಬಟ್ಟೆ ಮೇಲೆ ರಿಬೇಟ್‌ನಲ್ಲಿ ತಾರತಮ್ಯ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ನಮ್ಮಲ್ಲಿ ಉತ್ಪಾದನೆಯಾಗತಕ್ಕಂಥ ಸಿಲ್ಕ್ ಮತ್ತು ಖಾದಿ ಬಟ್ಟೆಗಳು ಪರ ರಾಜ್ಯಗಳಿಗೆ ಹೋಗುತ್ತವೆ, ಪರ ರಾಜ್ಯದವರು ನಾವು ಕಳುಹಿಸಿದಂಥ ಈ ಬಟ್ಟೆಗೆ ರಿಬೇಟ್‌ನ್ನು ಕೊಡುತ್ತಾರೆ. ಆದರೆ ಪರ ರಾಜ್ಯದಿಂದ ನಮ್ಮ ರಾಜ್ಯಕ್ಕೆ ಬರತಕ್ಕಂಥ ಬಟ್ಟೆ ಮೇಲೆ ರಿಬೇಟ್ ಬಂದ್ ಮಾಡುವಂಥ ಪರಿಸ್ಥಿತಿ ಸರ್ಕಾರ ಮಾಡಿರುವ ಆಜ್ಞೆಯಿಂದ ಉಂಟಾಗಿದೆ. ಇದೇ ರೀತಿ ಪರ ರಾಜ್ಯದವರು ನಮ್ಮ ಬಟ್ಟೆ ಮೇಲೆ ರಿಬೇಟ್‌ನ್ನು ತೆಗೆದುಹಾಕಿದರೆ ನಮ್ಮ ರಾಜ್ಯದಲ್ಲಿ ಬಟ್ಟೆ ಉತ್ಪಾದನೆ ಕಡಿಮೆಯಾಗಿ ಉದ್ಯೋಗವಕಾಶ ನಿಲ್ಲುತ್ತದೆ. ತಮಗೆ ಗೊತ್ತಿದ್ದ ಹಾಗೆ, ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಅಂಬರ ಚರಕದ ಮೇಲೆ ಬಹಳಷ್ಟು ಹೆಣ್ಣು ಮಕ್ಕಳು ನೂಲು ತೆಗೆಯುವುದರಿಂದ ಉದ್ಯೋಗ ಸಿಕ್ಕಿದೆ. ಪರ ರಾಜ್ಯದಿಂದ ಬರತಕ್ಕಂಥ ಬಟ್ಟೆಗೂ ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗತಕ್ಕಂಥ ಬಟ್ಟೆಗೂ ಬೆಲೆಯಲ್ಲಿ ಇರುವುದು ಕೇವಲ 160 ಲಕ್ಷ ರೂಪಾಯಿ ಮಾತ್ರ. ನಮ್ಮ ರಾಜ್ಯದಲ್ಲಿ 1988 ಲಕ್ಷ ರೂಪಾಯಿಗಳ ಬಟ್ಟೆ ಉತ್ಪಾದನೆಯಾಗಿದೆ. ಒಟ್ಟು ಬಟ್ಟೆ ಮಾರಾಟವಾಗಿರುವುದು 2148 ಲಕ್ಷ ರೂಪಾಯಿಗಳದು, ಅಂದರೆ ಡಿಫರೆನ್ಸ್ ಇರುವುದು 160 ಲಕ್ಷ ರೂಪಾಯಿ ಬಟ್ಟೆ ಮಾತ್ರ. ಅದರ ಮೇಲೆ ಸರ್ಕಾರದ ರಿಬೇಟ್ ಇರುವುದು 15 ಪರ್ಸೆಂಟ್ ಮಾತ್ರ. ಅಂದರೆ 16 ಲಕ್ಷ ಪ್ಲಸ್ 8 ಲಕ್ಷ ಒಟ್ಟು 24 ಲಕ್ಷ ರೂಪಾಯಿಗಳ ಪ್ರಶ್ನೆ ಇದಾಗುತ್ತದೆ. ಈ 24 ಲಕ್ಷ ರೂಪಾಯಿಗಳ ಸಲುವಾಗಿ ಈ ಒಂದು ಗೊಂದಲವನ್ನು ಎಬ್ಬಿಸಿ ಇಲ್ಲಿ ಉತ್ಪಾದನೆ ಮತ್ತು ಮಾರಾಟ ಮಾಡುವವರಿಗೆ ತೊಂದರೆ ಮಾಡಲಾಗಿದೆ. ನಿನ್ನೆ ದಿವಸದಿಂದ ಅಂದರೆ ಒಂದನೇ ತಾರೀಖಿನಿಂದ ಉತ್ತರ ಕರ್ನಾಟಕದಲ್ಲಿ ಖಾದಿ ಉತ್ಪಾದಕರು ತಮ್ಮ ಕಾರ್ಯಕ್ರಮಗಳನ್ನೆಲ್ಲಾ ರದ್ದುಪಡಿಸಿದ್ದಾರೆ. ಹಾಗಾಗಿ ನಮ್ಮ ಗದಗ್ ತಾಲ್ಲೂಕಿನಲ್ಲೇ ಎರಡು ಸಾವಿರ ಜನರಿಗೆ ಉದ್ಯೋಗ ಒದಗಿಸುತ್ತಿದ್ದಂಥ ಆ ಒಂದು ಯೂನಿಟ್ ಇವತ್ತು ಬಂದ್ ಆಗಿದೆ. ಆ ಉದ್ಯೋಗಸ್ಥರಲ್ಲಿ 90 ಪರ್ಸೆಂಟ್ ಲೇಡೀಸ್ ಇದ್ದಾರೆ. ತಮಗೆ ಗೊತ್ತಿರುವ ಹಾಗೆ, ಅಂಬರ ಚರಕದಲ್ಲಿ ನಮ್ಮ ಕಡೆ ಲೇಡೀಸೇ ನೂಲನ್ನು ತೆಗೆಯುತ್ತಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಕೊಡುವ ಸಲುವಾಗಿ ಉದ್ಯೋಗ ಭರವಸೆ ಯೋಜನೆ ಮತ್ತು ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ 200 ಕೋಟಿ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡಲಾಗುತ್ತಿದೆ. ಆದೇ ರೀತಿ ಖಾದಿ ಮಂಡಳಿಯವರೂ ಗ್ರಾಮೀಣ ಪ್ರದೇಶದ ಜನರಿಗೆ ಉದ್ಯೋಗ ಒದಗಿಸುತ್ತಿರುವಂಥ ಸಂದರ್ಭದಲ್ಲಿ ಕೇವಲ 20 ಲಕ್ಷ ರೂಪಾಯಿಗಳನ್ನು ಉಳಿಸುವುದಕ್ಕಾಗಿ ಸರ್ಕಾರ ಹೀಗೆ ಏಕೆ ಮಾಡುತ್ತದೆಂದು ಕೇಳುತ್ತೇನೆ. ಖಾದಿ ಮಂಡಳಿಯಿಂದ ಉದ್ಯೋಗ ಸಿಕ್ಕಿದರೂ ಅಷ್ಟೇ, ಉದ್ಯೋಗ ಭರವಸೆ ಯೋಜನೆಯಡಿ ಉದ್ಯೋಗ ಸಿಕ್ಕಿದರೂ ಅಷ್ಟೇ, ರೋಜ್ಗಾರ್ ಯೋಜನೆಯಡಿ ಉದ್ಯೋಗ ಸಿಕ್ಕಿದರೂ ಅಷ್ಟೇ. ನಾನು ಕೇಳುತ್ತಿರುವುದಿಷ್ಟೇ, ರಿಬೇಟ್ ವಿಷಯದಲ್ಲಿ ತಾರತಮ್ಯ ಮಾಡುವುದು ಬೇಡ, ನಮ್ಮ ರಾಜ್ಯದಲ್ಲಿ ಉತ್ಪಾದನೆಯಾದ ಬಟ್ಟೆಗೆ ಹೊರ ರಾಜ್ಯದಲ್ಲಿ ಯಾವ ರಿಬೇಟ್ ಕೊಡುತ್ತಾರೋ ಆದೇ ರೀತಿ ಬೇರೆ ರಾಜ್ಯಗಳಲ್ಲಿ ಉತ್ಪಾದನೆಯಾದ ಬಟ್ಟೆಗಳು ನಮ್ಮ ರಾಜ್ಯದಲ್ಲಿ ಮಾರಾಟವಾಗುವಂಥ ಸಂದರ್ಭದಲ್ಲಿ ಮೊದಲಿದ್ದ ಹಾಗೆ ರಿಬೇಟ್ ಕೊಡುವುದನ್ನು ಮುಂದುವರಿಸಬೇಕು. ಈ ಕೆಲಸವನ್ನು ದಯವಿಟ್ಟು ಸರ್ಕಾರ ಮಾಡಬೇಕು. ಮಾಡಲಿಲ್ಲವೆಂದರೆ ರಾಜ್ಯದಲ್ಲಿರುವ ಎಲ್ಲಾ ಖಾದಿ ಯೂನಿಟ್‌ಗಳನ್ನು ಬಂದ್ ಮಾಡಬೇಕಾಗುತ್ತದೆ. ಖಾದಿ ಯೂನಿಟ್-ಗಳು ಬಂದ್ ಆದರೆ ರಾಜ್ಯದ ಎಲ್ಲಾ ಭಾಗಗಳಲ್ಲೂ ಆದರಲ್ಲೂ ನಮ್ಮ ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶಗಳ ಖಾದಿ ಉದ್ಯೋಗಸ್ಥರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ, ಈಗ ಹೊರಡಿಸಲಾಗಿರುವ ಸರ್ಕಾರದ ಆಜ್ಞೆಯನ್ನು ಮರು ಪರಿಶೀಲನೆ ಮಾಡಿ ರಿಬೇಟ್ ಒದಗಿಸುವಂಥ ಕೆಲಸ ಮಾಡಬೇಕು.

ಶ್ರೀ ಬಿ.ಎ. ಮೊಯಿದ್ದೀನ್:- ಮಾನ್ಯ ಉಪಾಧ್ಯಕ್ಷರೇ, ನಮ್ಮ ರಾಜ್ಯದಲ್ಲೇ ಬಟ್ಟೆ ಉತ್ಪಾದನೆ-ಯಾಗಬೇಕು ಹಾಗೂ ಗ್ರಾಮೀಣ ಜನರಿಗೆ ಉದ್ಯೋಗ ಸಿಗಬೇಕು ಎನ್ನುವುದರಲ್ಲಿ ಸರ್ಕಾರದ್ದು ಎರ-ಡನೇ ಅಭಿಪ್ರಾಯವಿಲ್ಲ. ಆದರೆ, ಬೇರೆ ರಾಜ್ಯದಲ್ಲಿ ಉತ್ಪಾದನೆಯಾಗತಕ್ಕಂಥ ಮಾಲಿಗೆ ಇಲ್ಲಿ ರಿಬೇಟ್ ಕೊಡಬೇಕು ಎನ್ನುವ ವಾದದಲ್ಲಿ ಎಷ್ಟರಮಟ್ಟಿಗೆ ಸಮಂಜಸವಿದೆಯೆಂದು ನನಗೆ ಗೊತ್ತಾಗುವುದಿಲ್ಲ. ಆದರೂ ಸಹ ನಾವು ಏನು ಮಾಡಿದ್ದೇನೆಂದರೆ, ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗತಕ್ಕಂಥ ನೂಲಿನ ಬಟ್ಟೆಗಳಿಗಿಂಥಾ ಹೆಚ್ಚು ಕೌಂಟಿನ ನೂಲಿನ ಬಟ್ಟೆಗಳನ್ನು ತರಿಸಿದರೆ ಅಂಥವುಗಳಿಗೆ ನಾವು ರಿಬೇಟ್ ಕೊಡುತ್ತಿದ್ದೇವೆ. ನಮ್ಮ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಖಾದಿ ಉದ್ದಿಮೆಗಳಲ್ಲಿ ಉತ್ಪಾದನೆ-ಯಾಗುವಂಥ ಬಟ್ಟೆಗೆ ಹೆಚ್ಚು ರಿಬೇಟ್ ಕೊಡಬೇಕೆಂದು ನಾವು ಯೋಚನೆ ಮಾಡುತ್ತಿದ್ದೇವೆ. ಆದರೆ, ಕೇವಲ ವ್ಯಾಪಾರಕ್ಕಾಗಿ ಮಳಿಗೆಗಳನ್ನು ಇಟ್ಟಂಥವರಿಗೆ ಈ ರಿಬೇಟ್ ಹೋಗಬೇಕೆ? ಯಾರು ಉತ್ಪಾ-ದನೆಯಲ್ಲಿ ತೊಡಗಿದ್ದಾರೋ ಅಂಥವರಿಗೆ ಸಬ್ಸೀಡಿ ಮತ್ತು ರಿಬೇಟ್ ಕೊಡಬೇಕಾದ್ದು ನ್ಯಾಯ ತಾನೆ? ಆ ದಿಸೆಯಲ್ಲಿ ನಾವು ಕಾರ್ಯಪ್ರವೃತ್ತರಾಗಿದ್ದೇವೆ. 1992 ರಲ್ಲಿ ಮಾಡಿರುವ ಸರ್ಕಾರದ ಆಜ್ಞೆ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆ ಆಜ್ಞೆಯನ್ನು ಮಾನ್ಯ ಸದಸ್ಯರ ಪಕ್ಷದ ಸರ್ಕಾರ ಇದ್ದಾಗಲೇ ಮಾಡಿದ್ದು. ಆ ಆಜ್ಞೆಯಲ್ಲಿ ಏನಿದೆ ಎಂದರೆ, ಕರ್ನಾಟಕದಲ್ಲಿ ಉತ್ಪಾದನೆಯಾದ ಖಾದಿ ಬಟ್ಟೆಗಳಿಗೆ ಮಾತ್ರ ರಿಬೇಟ್ ಕೊಡಲಾಗುತ್ತದೆಂದು ಖಡಾಖಂಡಿತವಾಗಿ ಹೇಳಲಾಗಿದೆ. ಇದರ ಜೊತೆಗೆ ಪ್ರಧಾನ

ಮಂತ್ರಿಗಳ ನೇತೃತ್ವದಲ್ಲಿ ಒಂದು ಖಾದಿ ಹೈ ಪವರ್ ಕಮಿಷನ್ ಇದೆ. ಹಿಂದಿನ ಮಾಜಿ ಪ್ರಧಾನಿ ಮಂತ್ರಿಯವರೇ ಈ ಬಗ್ಗೆ ವಿಚಾರ ಮಾಡಿ ಖಾದಿ ಉತ್ಪಾದನೆ ಜಾಸ್ತಿ ಮಾಡುವುದಕ್ಕೋಸ್ಕರ ಯಾರು ಅದನ್ನು ಉತ್ಪಾದನೆ ಮಾಡುತ್ತಾರೋ ಅವರಿಗೆ ಸಂಬಳ ಜಾಸ್ತಿಯಾಗಬೇಕು, ಗ್ರಾಮಾಂತರ ಪ್ರದೇಶ-ಗಳಲ್ಲಿ ಕೆಲಸ ಮಾಡತಕ್ಕಂಥ ಖಾದಿ ಉತ್ಪಾದನಾ ಜನರಿಗೆ ಹೆಚ್ಚಿನ ಕೆಲಸ ಮತ್ತು ಸಹಾಯ ಸಿಗಬೇಕು, ಪಟ್ಟಣದಲ್ಲಿ ಮಳಿಗೆಗಳನ್ನು ತೆಗೆದುಕೊಂಡವರಿಗೆ ಅನುಕೂಲ ಮಾಡುವುದಿಲ್ಲವೆಂದು ನಿರ್ಣಯ ಮಾಡಿದ್ದಾರೆ. ಮಾರ್ಕೆಟ್ ಡೆವಲಪ್‌ಮೆಂಟ್ ಅಸಿಸ್ಟೆನ್ಸ್‌ಗೋಸ್ಕರ 20 ಪರ್ಸೆಂಟ್ ಕೊಡಬೇಕೆಂದು ಅವರು ನಿರ್ಣಯ ಮಾಡಿದ್ದರು. ಮೊನ್ನೆ ಇವರೆಲ್ಲ ರೆಪ್ರಸೆಂಟೇಷನ್ ಕೊಟ್ಟಿದ್ದರಿಂದ ಪುನಃ ಅಡ್-ಹಾಕ್ ಆಗಿ ಅವರು ಏನು ಹೇಳಿದ್ದಾರೆಂದರೆ, ಈ ಎಂ.ಡಿ.ಎ.ಯನ್ನು ನಾವು ತಾತ್ಕಾಲಿಕವಾಗಿ ನಿಲ್ಲಿಸು-ತ್ತೇವೆ, ಹಿಂದೆ ಏನಿತ್ತು ಆ ಒಂದು ರಿಬೇಟ್‌ನ್ನು ನಾವು ಈ ಒಂದು ವರ್ಷದ ಮಟ್ಟಿಗೆ ಮಾತ್ರ ನಾವು ಕೊಡಲು ತಯಾರಾಗಿದ್ದೇವೆ, ಅದು ಕೂಡ 10 ಪರ್ಸೆಂಟ್‌ನಷ್ಟು ರಿಬೇಟ್ ಕೊಡುತ್ತೇವೆ ಎಂಬ ಆಜ್ಞೆಯನ್ನು ಮೊನ್ನೆ ತಾನೇ ಮಾಡಿದ್ದಾರೆ. ಆದಾಗ್ಯೂ ಮಾನ್ಯ ಡಿ.ಆರ್.ಪಾಟೀಲರವರಿಗೆ ತಮ್ಮ ಮೂಲಕ ತಿಳಿಸುತ್ತೇನೆ, ಆಗಿದ್ದು ಆಗಿ ಹೋಗಿದೆ. ಈ ಒನ್‌ಟೈಂ ಸೆಟಲ್‌ಮೆಂಟ್‌ನ್ನು ನಾವು ಮಾಡ-ಬೇಕೆಂದಿದ್ದೇವೆ. ಒನ್‌ಟೈಂ ಸೆಟಲ್‌ಮೆಂಟ್ ಆದಮೇಲೆ ಉತ್ಪಾದನಾ ಯೂನಿಟ್ ಏನು ಇರುತ್ತದೆ, ಯಾರು ನಿರುದ್ಯೋಗಿಗಳಾಗಿರುತ್ತಾರೆ, ಅವರನ್ನು ನಿರುದ್ಯೋಗಿಗಳಾಗಿರುವುದಕ್ಕೆ ನಾವು ಬಿಡುವುದಿಲ್ಲ. ಅವರಿಗೆ ಹೆಚ್ಚು ಉದ್ಯೋಗವನ್ನು ಕೊಡತಕ್ಕಂಥಾದ್ದನ್ನು ಖಂಡಿತವಾಗಿಯೂ ನಾವು ಮಾಡುತ್ತೇವೆ. ನಿಮ್ಮನ್ನು ನಾನು ಕರೆಸುತ್ತೇನೆ. ನಮ್ಮ ಸೆಕ್ರೆಟರಿಗೆ ಆಜ್ಞೆ ಮಾಡುತ್ತೇನೆ. ದಯಮಾಡಿ ತಾವು ಬನ್ನಿ, ಅವರೂ ಬರಲಿ. ಕುಳಿತುಕೊಂಡು ಒಂದು ಚರ್ಚೆ ಮಾಡಿ, ಕೂಲಂಕುಷವಾಗಿ ಚರ್ಚೆ ಮಾಡಿ ಇದಕ್ಕೆ ಕಾಯಕಲ್ಪ ಕೊಡುವ ಕೆಲಸವನ್ನು ನಾವು ಖಂಡಿತವಾಗಿಯೂ ಮಾಡುತ್ತೇವೆ ಎಂಬ ಭರವಸೆಯನ್ನು ಮಾನ್ಯ ಪಾಟೀಲರಿಗೆ ತಮ್ಮ ಮೂಲಕ ಕೊಡ ಬಯಸುತ್ತೇನೆ.

ಉಪಾಧ್ಯಕ್ಷರು:- ಈಗ ಸದನವನ್ನು ಮುಂದೂಡಿ ಪುನಃ ಬುಧವಾರ ಬೆಳಿಗ್ಗೆ 11-00 ಗಂಟೆಗೆ ಸೇರುವುದು.

(ಸದನವು ಸಂಜೆ 5-03 ಗಂಟೆಗೆ ಮುಕ್ತಾಯಗೊಂಡು ಪುನಃ ದಿನಾಂಕ 7ನೇ ಆಗಸ್ಟ್ 1996ರ ಬುಧವಾರ ಬೆಳಿಗ್ಗೆ 11-00 ಗಂಟೆಗೆ ಸೇರಲು ನಿರ್ಧರಿಸಲಾಯಿತು.)

(+ ಈ ಚಿನ್ಹೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸುವುದಿಲ್ಲ ಎಂದು ಸೂಚಿಸುತ್ತದೆ)